**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

**ದಿಃ 17/12/2019**
**ಅಸಲು ದಾವೆ.ನಂ. 226/2013**
**ಪಿ.ಡಬ್ಲ್ಯೂ 1**

( ಪಾಟೀ ಸವಾಲುಃ ಶ್ರೀ ಎಸ್.ಹೆಚ್.ಆರ್. ವಕೀಲರಿಂದ )

ನನ್ನ ತಂದೆಯ ಹೆಸರು ಪಾಪಯ್ಯ ಅವರು ಈಗ್ಗೆ 8 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಮ್ಮ ತಂದೆ ಮೃತಪಟ್ಟಾಗ ಶನಿವಾರಸಂತೆಯಲ್ಲಿ ವಾಸವಿದ್ದರು. ಅವರು ಮೃತಪಡುವ 30 ವರ್ಷಗಳ ಹಿಂದಿನಿಂದಲೂ ಶನಿವಾರಸಂತೆಯಲ್ಲಿ ವಾಸವಿದ್ದರು. ನನ್ನ ತಂದೆ ಕೂಲಿ ಕೆಲಸ ಮಾಡುತ್ತಿದ್ದರು. ನಾನು ನನ್ನ ತಂದೆಯ ಜೊತೆ ಶನಿವಾಸಂತೆಯಲ್ಲಿ ವಾಸವಿದ್ದೇನು ಈಗಲೂ ಸಹ ಅಲ್ಲಯೇ ವಾಸವಿದ್ದೇನೆ. ನನ್ನ ತಾಯಿಯ ಹೆಸರು ನಂಜಮ್ಮ. ಅವರು ಈಗ್ಗೆ 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಮ್ಮ ತಂದೆ ಮೃತಪಟ್ಟ ದಿನಾಂಕ ನೆನಪಿಲ್ಲ. ನನ್ನ ತಂದೆಗೆ 3 ಜನ ಹೆಣ್ಣು ಮಕ್ಕಳು ಮತ್ತು ನಾನು ಒಬ್ಬ ಮಗ.

ಪಾಪಯ್ಯನವರ ತಂದೆಯ ಹೆಸರು ನಿಂಗಯ್ಯ. ನಾನು ಅವರನ್ನು ನೋಡಿರಲಿಲ್ಲ. ನಿಂಗಯ್ಯನವರಿಗೆ ಇಬ್ಬರು ಹೆಣ್ಣುಮಕ್ಕಳು ಅವರುಗಳು ಎಂದರೆ ಸಿದ್ದಲಿಂಗಮ್ಮ ಮತ್ತು ನಿಂಗಮ್ಮ ಇಬ್ಬರು ಗಂಡು ಅವರುಗಳು ಎಂದರೆ ಕರಿಯಯ್ಯ ಮತ್ತು ಪಾಪಯ್ಯ. ನಿಂಗಮ್ಮ ಈಗ್ಗೆ 2 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಮೃತ ನಿಂಗಮ್ಮನವರಿಗೆ 3 ಜನ ಗಂಡು ಮಕ್ಕಳಿದ್ದು ಅವರಲ್ಲಿ ಇಬ್ಬರು ಮೃತಪಟ್ಟಿದ್ದು ಇನ್ನೊಬ್ಬರು ಕುಮಾರ. ಕುಮಾರ ಅರಕಲಗೂಡಿನಲ್ಲಿ ವಾಸವಿದ್ದಾರೆ. ಸಿದ್ದಲಿಂಗಮ್ಮನವರು ಅರಕಲಗುಾಡಿನಲ್ಲಿ ವಾಸವಿದ್ದಾರೆ.

ನನ್ನ ತಾತ ನಿಂಗಯ್ಯನವರು ಸುಮಾರು 40-50 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಕರಿಯಯ್ಯನವರು ಮೃತಪಟ್ಟು 40 ವರ್ಷಗಳು ಆಗಿವೆ. ನಿಂಗಯ್ಯ ಮತ್ತು ಕರಿಯಯ್ಯ ಒಟ್ಟಿಗೆ ಕಲ್ಲೂರಿನಲ್ಲಿ ವಾಸವಿದ್ದರು. ಕರಿಯಯ್ಯನವರಿಗೆ ನಿಂಗಮ್ಮ ಎಂಬ ಒಬ್ಬ ಮಗಳು ಇದ್ದಾರೆ. ನಿಂಗಮ್ಮನವರ ಗಂಡನ ಹೆಸರು ದಾಸಯ್ಯ. ಕರಿಯಯ್ಯನವರಿಗೆ ಗಂಡು ಸಂತಾನವಿರಲಿಲ್ಲ. ಕರಿಯಯ್ಯನವರಿಗೆ ಯಾವುದೇ ಆಸ್ತಿ ಇರಲಿಲ್ಲ, ಅಜ್ಜನ ಆಸ್ತಿ ಮಾಡುತ್ತಿದ್ದರು. ಕರಿಯಯ್ಯನವರ ಅಜ್ಜನವರಿಗೆ ಎಷ್ಟು ಆಸ್ತಿ ಇತ್ತು ಎಂದು ಗೊತ್ತು. ಅವುಗಳು ಎಂದರೆ ಸ.ನಂಃ 53 ರಲ್ಲಿ 4 ಎಕರೆ 24 ಗುಂಟೆ, ಸ.ನಂಃ 54 ರಲ್ಲಿ 3 ಎಕರೆ 13 ಗುಂಟೆ, ಸ.ನಂಃ 58 ರಲ್ಲಿ 30 ಗುಂಟೆ ಮತ್ತು ಸ.ನಂಃ 29 ರಲ್ಲಿ 1 ಎಕರೆ 30 ಗುಂಟೆ ಜಮೀನು ಇದೆ. ನಿಂಗಯ್ಯನವರಿಗೆ ಸದರಿ ಆಸ್ತಿಗಳು ಹೇಗೆ ಬಂತು

ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು ನಾನು ನೋಡಿದ್ದೇನೆ. ಸದರಿ ಜಮೀನುಗಳ ಈಗಿನ ಕಂದಾಯ ದಾಖಲಾತಿಗಳನ್ನು ನಾನು ನೋಡಿದ್ದೇನೆ.

ಸ. ನಂಃ 53 ರ 2013-14 ನೇ ಸಾಲಿನ ಪಹಣಿಯು ಚುಂಚೇಗೌಡ ಬಿನ್ ಚನ್ನಬೈರೇಗೌಡರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು 40 ವರ್ಷಗಳಿಂದ ಶನಿವಾರಸಂತೆಯಲ್ಲಿ ವಾಸವಿದ್ದರು. ನನ್ನ ತಂದೆ ಬರಗಾಲದ ಕಾರಣ ಶನಿವಾರಸಂತೆಗೆ ಕೂಲಿ ಕೆಲಸಕ್ಕಾಗಿ ಹೋಗಿರುತ್ತಾರೆ. ಕರಿಯಯ್ಯ ಮತುತ ನಿಂಗಯ್ಯನವರ ನಡುವೆ ಯಾರು ಮೊದಲು ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದರಿಂದ ಅನುಮತಿಸಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.